2ನೇ ಅಪರ ಮುಖ್ಯ ಮಹಾನಗರ  ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ
ಸಿ.ಸಿ.ನಂಃ 613 ಃ2023

| | | | |
|---|---|---|---|
| ಸಾಕ್ಷಿದಾರನ ಹೆಸರು | ಬಿ.ಎಂ ರೂಪದೇವಿ | ಸಿ ಡಬ್ಲ್ಯು | 1 |
| ಗಂಡನ ಹೆಸರು | ಮಹೇಶ್ | ಪಿ ಡಬ್ಲ್ಯು | 3 |
| ವಯಸ್ಸು | 41 ವರ್ಷ | | |
| ಉದ್ಯೋಗ | ಅಬಕಾರಿ ಇನ್ಸ್ ಪೆಕ್ಟರ್ | | |
| ವಾಸಸ್ಥಾನ | ಕೋರಮಂಗಲ, ಬೆಂಗಳೂರು | | |

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 14.02.2024.

ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ-

ನಾನು ಮೇ 2020 ರಿಂದ ಆಗಸ್ಟ್ 2023 ರವರೆಗೆ ಬನಶಂಕರಿ ಅಬಕಾರಿ ವಲಯ-37 ರಲ್ಲಿ ಅಬಕಾರಿ ನಿರೀಕ್ಷಕಳಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ 21.04.2022 ರಂದು ಸಂಜೆ 7.30 ಗಂಟೆಗೆ ನಾನು ಕಚೇರಿಯಲ್ಲಿ ಇದ್ದಾಗ ಯಾದಳಂ ನಗರದ ಗೋಪಾಲಕೃಷ್ಣ ಬಡಾವಣೆ, ಸುಬ್ರಮಣ್ಯಪುರ ಅಂಚೆ, ಉತ್ತರಹಳ್ಳಿ ಹೋಬಳಿಯ ಕೆ.ಇ.ಬಿ ಕಚೇರಿಯ ಬಳಿ ಒಬ್ಬ ವ್ಯಕ್ತಿ ಗಾಂಜಾ ಮಾರಾಟ ಮಾಡುತ್ತಿರುವುದಾಗಿ ಬಾತ್ಮೀದಾರರಿಂದ ಮಾಹಿತಿ ಬಂತು. ನಂತರ ಹಿರಿಯ ಅಧಿಕಾರಿಗಳಿಗೆ ಸದರಿ ವಿಚಾರವನ್ನು ತಿಳಿಸಿ ನಾನು ಹಾಗೂ ಚಾಸಾ 2 ರಿಂದ 7 ರವರು ಮಾಹಿತಿ ಬಂದ ಸ್ಥಳಕ್ಕೆ ಹೋದೆವು. ನಾವು ಸ್ಥಳಕ್ಕೆ ಹೋಗುವಾಗ ಉತ್ತರಹಳ್ಳಿಯ ವೃತ್ತದ ಬಳಿ ನಿಂತಿದ್ದ ಇಬ್ಬರು ವ್ಯಕ್ತಿಗಳನ್ನು ಪಂಚರಾಗಿ ಬರಲು ಕರೆದಿದ್ದು ಅವರು ಪಂಚರಾಗಿ ಬರಲು ಒಪ್ಪಿ ಕೊಳ್ಳಲಿಲ್ಲ. ಆದ್ದರಿಂದ ನಾನು ಅಬಕಾರಿ ಸಿಬ್ಬಂದಿಗಳಾದ ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಪರಿಗಣಿಸಿ ಅವರಿಗೆ ನೋಟೀಸು ಜಾರಿ ಮಾಡಿರುತ್ತೇನೆ. ಸದರಿ ನೋಟೀಸನ್ನು ನೋಡಿ ಗುರ್ತಿಸುತ್ತಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 2(ಸಿ) ಎಂದು ಗುರ್ತಿಸಿದ್ದೇನೆ. ನಾವು ಘಟನಾ ಸ್ಥಳಕ್ಕೆ ಹೋದಾಗ ರಾತ್ರಿ 9.00 ಗಂಟೆ ಸಮಯವಾಗಿತ್ತು. ನಾವು ದೂರದಲ್ಲಿ ವಾಹನವನ್ನು ನಿಲ್ಲಿಸಿ ಸಿಬ್ಬಂದಿಗಳನ್ನು ಕಳುಹಿಸಿ ಪರಿಶೀಲಿಸಲು ಹೇಳಿದೆನು. ಆ ಸಮಯದಲ್ಲಿ ಅಲ್ಲಿ ಇದ್ದ ಸುಜೂಕಿ ಏಕ್ಸೆಸ್ ದ್ವಿಚಕ್ರ ವಾಹನ ಸಂಖ್ಯೆ ಕೆ ಎ 05 ಹೆಚ್ ಎಸ್ 8335 ರ ವಾಹನದ ಮೇಲೆ ಸಂಶಯ ಬಂದು ಅದನ್ನು ಸುತ್ತುವರಿದು ಹಿಡಿದೆವು. ಸದರಿ ವಾಹನದ ಬಳಿ ಇದ್ದ ವ್ಯಕ್ತಿ ನಮ್ಮನ್ನು ನೋಡಿ ಓಡಿ ಹೋಗಲು

ಪ್ರಯತ್ನಿಸಿದ್ದು ನಾವು ಆತನನ್ನು ಹಿಡಿಯಲು ಪ್ರಯತ್ನಿಸಿದೆವು. ವಾಹನದ ಬಳಿ ಏಕೆ ಓಡುತ್ತಿದ್ದೀಯಾ ನಿನ್ನ ಬಳಿ ಅಥವಾ ವಾಹನದಲ್ಲಿ ಏನು ಇದೆ ಎಂದು ಕೇಳಿದಾಗ ವಾಹನದಲ್ಲಿ ಗಾಂಜಾ ಇದೆ ಎಂದು ತಿಳಿಸಿದರು. ನಂತರ ಆ ಸಮಯದಲ್ಲಿ ನ್ಯಾಯಾಲಯದಿಂದ ಜಪ್ತಿ ವಾರೆಂಟ್ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಶೋಧನ ಸಮುಚಿತ ಆಧಾರ ತಯಾರಿಸಿ ನಮ್ಮನ್ನು ಪರಿಶೀಲಿಸಿಕೊಂಡು ನಮ್ಮ ಜೊತೆ ಇದ್ದ ಇಲಾಖಾ ವಾಹನ ಸಂಖ್ಯೆ ಕೆ ಎ 01 ಜಿ 4540 ವಾಹನವನ್ನು ಪರಿಶೀಲಿಸಿದೆವು. ನಮ್ಮ ಬಳಿ ಯಾವುದೇ ರೀತಿಯ ವಸ್ತುಗಳು ಇಲ್ಲವೆಂದು ಖಾತರಿ ಪಡಿಸಿಕೊಂಡ ನಂತರ ದ್ವಿ ಚಕ್ರ ವಾಹನವನ್ನು ಪರಿಶೀಲಿಸಿದೆವು. ಸದರಿ ದ್ವಿ ಚಕ್ರ ವಾಹನದ ಡಿಕ್ಕಿಯಲ್ಲಿ ಒಂದು ಪ್ಲಾಸ್ಟಿಕ್ ಕವರ್ ಒಳಗೆ ಒಂದು ಪಾರದರ್ಶಕವಾದ ಪ್ಲಾಸ್ಟಿಕ್ ಕವರ್‌ನಲ್ಲಿ ಸೊಪ್ಪು, ಹೂ, ಬೀಜ ಹಾಗೂ ತೆನೆ ಮಿಶ್ರಿತ ಒಣ ಸೊಪ್ಪು ಇತ್ತು. ನಂತರ ಸದರಿ ಸೊಪ್ಪು ಏನು ಇರಬಹುದು ಎಂದು ಪರಿಶೀಲಿಸಲು ನಮ್ಮ ಕೈ ಮೇಲೆ ಅದನ್ನು ಉಜ್ಜಿ ನೋಡಲಾಗಿ ಅದರ ಗಾಟಿನ ವಾಸನೆಯಿಂದ ಅದು ಗಾಂಜಾ ಎಂದು ತಿಳಿಯಿತು. ನಂತರ ಸದರಿ ವ್ಯಕ್ತಿಯ ಹೆಸರು ಏನು ಎಂದು ಕೇಳಲಾಗಿ ಆತನ ಹೆಸರು ಶಿವಕುಮಾರ್ ಬಿನ್ ಅಂದಾನಯ್ಯ, ವಯಸ್ಸು 29 ವರ್ಷ, ಆದಿ ಕರ್ನಾಟಕ ಜನಾಂಗ, ನಂ.71/1, ವಾಸುದೇವಪುರ, ತರಳು, ಬೆಂಗಳೂರು ದಕ್ಷಿಣ ತಾಲ್ಲೂಕು ಎಂಬಲ್ಲಿ ವಾಸವಿರುವುದಾಗಿ ತಿಳಿಸಿದರು. ಆತನ ಬಳಿ ವಿಚಾರಿಸಿದಾಗ ಆತ ಅದನ್ನು ಮಾರಾಟದ ಉದ್ದೇಶಕ್ಕಾಗಿ ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದರು. ಅದನ್ನು ಎಲ್ಲಿಂದ ತಂದಿರುವುದಾಗಿ ವಿಚಾರಿಸಿದಾಗ ಆತ ಸರಿಯಾಗಿ ಉತ್ತರ ನೀಡಲಿಲ್ಲ. ನಂತರ ನಮ್ಮ ವಾಹನದಲ್ಲಿ ಇದ್ದ ಡಿಜಿಟಲ್ ತೂಕದ ಯಂತ್ರವನ್ನು ತೆಗೆದು ವಾಹನದಲ್ಲಿ ಇದ್ದ ವಸ್ತುವನ್ನು ಅಳತೆ ಮಾಡಿದಾಗ ಅದರಲ್ಲಿ 540 ಗ್ರಾಂ ಗಾಂಜಾ ಕಂಡುಬಂತು. ದೊರೆತ ಗಾಂಜಾದಿಂದ 2 ಮಾದರಿಯನ್ನು ತೆಗೆದು ಅದನ್ನು ಒಂದು ಹಸಿರು ಬಣ್ಣದ ಲಕೋಟೆಯಲ್ಲಿ ಹಾಕಿದೆನು. ನಂತರ ಮಾದರಿ ಮೊಹರು ನಕಲು ಮಾಡಿ ಜಪ್ತಿ ಪಡಿಸಿದ ವಸ್ತುಗಳ ಪಟ್ಟಿಯನ್ನು ತಯಾರಿಸಿದೆನು. ಸದರಿ ಪಟ್ಟಿಯಲ್ಲಿ ಆರೋಪಿಯ ಸಹಿಯನ್ನು ಪಡೆದೆನು. ಅವುಗಳಿಗೆ ನಾನು ಸಹ ಸಹಿಯನ್ನು ಮಾಡಿದೆನು. ನಂತರ ಆತನನ್ನು ಹಾಗೂ ವಾಹನವನ್ನು ಮಾಲು ಸಮೇತ ವಶಕ್ಕೆ ಪಡೆದು ಆತನ ಹೆತ್ತವರಿಗೆ ದೂರವಾಣಿ ಮೂಲಕ ತಿಳಿಸಿದೆವು. ನಂತರ ರಾತ್ರಿ 9.00 ಗಂಟೆಯಿಂದ 11.00 ಗಂಟೆವರೆಗೆ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದೆನು. ನಂತರ ಆರೋಪಿಯನ್ನು ಹಾಗೂ ಅಮಾನತ್ತು ಪಡಿಸಿಕೊಂಡ ಮಾಲುಗಳನ್ನು ಠಾಣೆಗೆ ತಂದೆನು. ನಂತರ ಠಾಣೆಯಲ್ಲಿ ಸರ್ಕಾರದ ಪರವಾಗಿ ದೂರು ತಯಾರಿಸಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಮಾಹಿತಿಯನ್ನು ದಾಖಲಿಸಿ ಮೇಲಾಧಿಕಾರಿಗಳಿಗೆ ಮಾಹಿತಿ ರವಾನಿಸಿದ ಬಗ್ಗೆ ದಾಖಲಾತಿಯನ್ನು ನಿಪಿ 5, ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ 5(ಎ), ವಾಹನ ಶೋಧಿಸುವ ಮೊದಲು ಬರೆದ ರೆಕಾರ್ಡ್ ಆಫ್ ರಿಸನ್ಸ್ ಅನ್ನು ನಿಪಿ 6 ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ 6(ಎ), ಮಾದರಿ ಸೀಲನ್ನು ನಿಪಿ 7 ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ 7(ಎ), ಅಮಾನತ್ತು ಪಂಚನಾಮೆಯನ್ನು ಈಗಾಗಲೇ ನಿಪಿ 1 ಎಂದು ಗುರುತಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 1(ಬಿ), ಅಮಾನತ್ತು ಪಡಿಸಿಕೊಂಡ ಮಾಲುಗಳ ಪಟ್ಟಿಯನ್ನು ನಿಪಿ 8 ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ 8(ಎ), ದೂರನ್ನು ನಿಪಿ 9 ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ 9(ಎ), ಪ್ರಥಮ ವರ್ತಮಾನ ವರದಿಯನ್ನು ನಿಪಿ 10 ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ 10(ಎ) ಎಂದು ಗುರ್ತಿಸಿದ್ದೇನೆ.

ನಂತರ ಆರೋಪಿ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಆತನನ್ನು ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆರೋಪಿಯನ್ನು ನೋಡಿ ಗುರ್ತಿಸುತ್ತಿದ್ದೇನೆ. ಆರೋಪಿಯಿಂದ ಅಮೂನತ್ತು ಪಡಿಸಿಕೊಂಡ ಗಾಂಜಾವನ್ನು ನಿಪಿ 3 ಮತ್ತು 4 ರ ಪೆಟೋಗಳಲ್ಲಿ ನೋಡಿ ಗುರ್ತಿಸುತ್ತಿದ್ದೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 10 ರವರಿಗೆ ಹಸ್ತಾಂತರಿಸಿರುತ್ತೇನೆ. ಅಮಾನತ್ತು ಪಡಿಸಿಕೊಂಡ ದ್ವಿಚಕ್ರ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಮಾದರಿ ಗಾಂಜಾವನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ 01 ಎಂದು ಗುರ್ತಿಸಿದ್ದೇನೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಆರೋಪಿ ಹಾಜರಿದ್ದು, ವಕೀಲರು ಗೈರು ಹಾಜರಿದ್ದು ಪಾಟೀ ಸವಾಲನ್ನು ಮುಂದೂಡಲು ಯಾವುದೇ ಸಕಾರಣ ಇರುವುದಿಲ್ಲ, ಆದ್ದರಿಂದ ಪಾಟೀ ಸವಾಲನ್ನು ಇಲ್ಲವೆಂದು ಪರಿಗಣಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ವೇದಮೂರ್ತಿ ಬಿ.ಎಸ್.)

2ನೇ ಅ ಮು ಮ ದಂ.